2018 ಕ.ತೀ.ವ 1763

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

## ಶ್ರೀಮತಿ ಚೆನ್ನಮ್ಮ ಮತ್ತು ಇತರರು –ವಿರುದ್ಧ– ಶ್ರೀ ಶೀನಪ್ಪ ಗೌಡ*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 43ರ ನಿಯಮ 1(ಯು) ಅಡಿಯಲ್ಲಿನ ಸಂಕೀರ್ಣ ಎರಡನೇ ಅಪೀಲು.

ಸಿವಿಲ್ ಪ್ರಕ್ರಿಯಾ ಸಂಹಿತೆ 1908, ಕ್ರಮಾದೇಶ 43ರ 1(ಯು) ನಿಯಮದ ಅಡಿ ಮೇಲ್ಮನವಿಯನ್ನು ಕೆಳ ನ್ಯಾಯಾಲಯಕ್ಕೆ ವರ್ಗಾಯಿಸುವ ಮುನ್ನ ಸಿವಿಲ್ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣ ಮತ್ತು 41ನೇ ಕ್ರಮಾದೇಶದ 24 ಮತ್ತು 25ನೇ ನಿಯಮಗಳ ಉಪಬಂಧಗಳನ್ನು ಯುಕ್ತವಾಗಿ ಗಮನಿಸಬೇಕಾಗುತ್ತದೆ. ಸೂಕ್ತ ಕಾರಣಗಳಿಲ್ಲದೇ ಅಪೀಲನ್ನು ಕೆಳ ನ್ಯಾಯಾಲಯಕ್ಕೆ ವರ್ಗಾಯಿಸುವುದು ಸರಿಯಾದ ಮಾರ್ಗವಲ್ಲ. ಆದ್ದರಿಂದ ಪ್ರಸ್ತುತ ಮೇಲ್ಮನವಿಯನ್ನು ಪರಿಗಣಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* — *ಪ್ಯಾರಾಗಳಲ್ಲಿ*

1. *(2002)2 ಎಸ್‌ಸಿಸಿ 686*
   *ಪಿ. ಪುರುಷೋತ್ತಮ ರೆಡ್ಡಿ ಮತ್ತು ಮತ್ತೊಬ್ಬರು –ವಿರುದ್ಧ– ಪ್ರತಾಪ್ ಸ್ಟೀಲ್ಸ್ ಲಿಮಿಟೆಡ್* (ಪ್ಯಾರಾ 10)
2. *ಐಎಲ್‌ಆರ್ 2010 ಕೆಎಆರ್ 3078*
   *ಉಮಾ –ವಿರುದ್ಧ– ಎನ್.ವಿ. ರಾಜಾಚಾರಿ* (ಪ್ಯಾರಾ 11)
3. *ಐಎಲ್‌ಆರ್ 2014 ಕೆಎಆರ್ 1937,*
   *ಎಂ.ಎಚ್. ಮಹಾಬಲೇಶ್ವರ್ –ವಿರುದ್ಧ– ಸಹಕಾರಿ ಸೊಸೈಟಿಗಳ ಜಂಟಿ ರಿಜಿಸ್ಟ್ರಾರ್, ಬೆಂಗಳೂರು* (ಪ್ಯಾರಾ 14)

*ಸಂಕೀರ್ಣ ಎರಡನೇ ಅಪೀಲು ಸಂ. 74/2015 (ಆರ್‌ಬಿ), ದಿನಾಂಕ 29ನೇ ಜುಲೈ, 2016.

ಅರ್ಜಿದಾರರ ಪರ: ಶ್ರೀ ಜಿ. ಬಾಲಕೃಷ್ಣ ಶಾಸ್ತ್ರಿ, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ಎಂ.ಜೆ. ಆಳ್ವ, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಪ್ರತಿವಾದಿಗಳು–ವಾದಿಗಳು ಹೆಚ್ಚುವರಿ ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ), ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯಾಲಯದಲ್ಲಿ, ವಾದಿ 'ಬಿ' ಮತ್ತು 'ಸಿ' ಯವರ ಅನುಸೂಚಿತ ಸ್ವತ್ತುಗಳಲ್ಲಿನ ಪಾಲು ಮತ್ತು ಪ್ರತ್ಯೇಕ ಸ್ವಾಧೀನತೆಯಲ್ಲಿನ ಷೇರುಗಳ ಸಂಬಂಧದಲ್ಲಿ ಮತ್ತು ಮಧ್ಯಕಾಲಿನ ಲಾಭಗಳ ಐತೀರ್ಪಿಗಾಗಿ ಡಿಕ್ರಿಯನ್ನು ಹೊರಡಿಸುವುದಕ್ಕೆ ಮೂಲ ದಾವೆ ಸಂ:41/1998ರಲ್ಲಿ ದಾವೆಯನ್ನು ಹೂಡಿರುವರು. 4ನೇ ಸಂಖ್ಯೆಯ ಪ್ರತಿವಾದಿ ಲಿಖಿತ ಹೇಳಿಕೆಯನ್ನು ದಾಖಲಿಸಿರುವರು. 1 ರಿಂದ 3ನೇ ಸಂಖ್ಯೆಯ ಪ್ರತಿವಾದಿಗಳು ಮೆಮೊವನ್ನು ದಾಖಲಿಸಿರುವರು ಮತ್ತು 4ನೇ ಸಂಖ್ಯೆಯ ಪ್ರತಿವಾದಿಯು ದಾಖಲಿಸಿದ ಲಿಖಿತ ಹೇಳಿಕೆಯನ್ನು ಅಂಗೀಕರಿಸಲಾಗಿದೆ. ವಾದಗಳನ್ನು ಆಧರಿಸಿದ ತರುವಾಯ ಉದ್ಭವಿಸಿರುವ 6 ವಿವಾದಾಂಶಗಳನ್ನು ರೂಪಿಸಲಾಗಿದೆ. ಎರಡು ಕಡೆಗಳ ಪಕ್ಷಕಾರರು ದಾವೆಯ ಕುರಿತು ವಿಚಾರಣೆ ಕಾಲದಲ್ಲಿ ಮೌಖಿಕ ಮತ್ತು ದಸ್ತಾವೇಜುಗಳ ಸಾಕ್ಷ್ಯವನ್ನು ದಾಖಲೆಗಳಲ್ಲಿ ಮಂಡಿಸಿದೆ. ದಾವೆಯನ್ನು ದಿನಾಂಕ: 13.11.2009ರಂದು ಡಿಕ್ರಿ ಮಾಡಿದ ತೀರ್ಪಿನ ಮೂಲಕ ವಾದಿಗಳು ದಾವೆ 'ಬಿ' ಅನುಸೂಚಿಯ ಸ್ವತ್ತುಗಳಲ್ಲಿ ಪಾಲನ್ನು ಮತ್ತು ಅರ್ಧ ಷೇರಿನ ಪ್ರತ್ಯೇಕ ಸ್ವಾಧೀನತೆಗೆ ಹಕ್ಕುಳ್ಳವರೆಂದು ನಿರ್ಣಯಿಸಿದೆ.

2. ವಾದಿಗಳು ದಾವೆಯ 'ಸಿ' ಅನುಸೂಚಿತ ಸ್ವತ್ತುಗಳ ಸಂಬಂಧದಲ್ಲಿ ಪರಿಹಾರವನ್ನು ಮಂಜೂರು ಮಾಡದಿರುವುದು ಭಾವನೆಗಳ ವ್ಯಾಪ್ತಿಗೆ ಆಗಿರುವ ಬಾಧಕವನ್ನು ಆರ್.ಎ. ಸಂ:28/2010ರಲ್ಲಿ ನಿವೇದಿಸಿದ್ದಾರೆ. ಪ್ರತಿವಾದಿಗಳು ಮೇಲಿನ

ತೀರ್ಪು ಮತ್ತು ವಿಚಾರಣಾ ನ್ಯಾಯಾಲಯದ ಡಿಕ್ರಿಯನ್ನು ಟೀಕಿಸಿದ್ದಾರೆ ಮತ್ತು ದಾವೆಯನ್ನು ಪುತ್ತೂರಿನಲ್ಲಿರುವ ಜಿಲ್ಲಾ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು ಇಲ್ಲಿ ಆರ್‌ಎ ಸಂ:29/2010 ರಂದು ದಾಖಲಿಸಿರುವರು. ಅಪೀಲು ನ್ಯಾಯಾಧೀಶರು ದಾವೆಯನ್ನು ಪರಿಗಣಿಸುವ ಸಲುವಾಗಿ ನಾಲ್ಕು ವಿವಾದಾಂಶಗಳ ಎತ್ತಿದ್ದಾರೆ ಮತ್ತು ಇಬ್ಬರೂ ಪಕ್ಷಕಾರರ ಅಪೀಲುಗಳನ್ನು ಪುರಸ್ಕರಿಸಿ ದಿನಾಂಕ: 28.04.2015 ರಂದು ತೀರ್ಪಿನ ಮೂಲಕ "ವಾದಿಯು ತಮ್ಮ ತಾಯಿ ವಾರಸುದಾರ ದಾವೆಯ 'ಸಿ' ಅನುಸೂಚಿತ ಸ್ವತ್ತುಗಳಿಗೆ ವಾದಿ ಮತ್ತು ಪ್ರತಿವಾದಿಗಳ ಪರವಾಗಿ ಮರಣ ಶಾಸನ ಮಾಡದೆ ವಾದಿಯ ತಾಯಿ ಕುಪ್ಪಕ್ಕಿ ಸಾವನ್ನಪ್ಪಿರುವುದು ರುಜುವಾತು ಪಡಿಸಿರುವರೇ?" ಎಂಬ ಹೆಚ್ಚುವರಿ ವಿವಾದಾಂಶವನ್ನು ರೂಪಿಸಿ, ವಿಚಾರಣಾ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಹಿಂದುರಿಗಿಸಿದ್ದಾರೆ. ವಿಚಾರಣಾ ನ್ಯಾಯಾಲಯ ಹೆಚ್ಚುವರಿ ವಿವಾದಾಂಶದ ಸಂಬಂಧದಲ್ಲಿ ಸಾಕ್ಷ್ಯವನ್ನು ಮುಂದಿಡುವುದಕ್ಕೆ ಇಬ್ಬರೂ ಪಕ್ಷಕಾರರಿಗೆ ಅವಕಾಶವನ್ನು ನೀಡುವುದಕ್ಕೆ ಮತ್ತು ಎಲ್ಲ ವಿವಾದಾಂಶವನ್ನು ಹೊಸದಾಗಿ ವಿಚಾರಣೆ ಮಾಡುವುದಕ್ಕೆ ಮತ್ತು ಕಾನೂನಿಗೆ ಅನುಸಾರವಾಗಿ ದಾವೆಯನ್ನು ಹೊಸದಾಗಿ ನಿರ್ಣಯಿಸಲು ನಿರ್ದೇಶಿಸಿರುತ್ತದೆ.

3. ಸದರಿ ತೀರ್ಪು ಪ್ರತಿವಾದಿಗಳ ಭಾವನೆಗಳಿಗೆ ಬಾಧಕವನ್ನುಂಟು ಮಾಡಿರುವುದರಿಂದ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XLIII ನಿಯಮ 1(ಯು) ಅಡಿಯಲ್ಲಿ ಅಪೀಲು ಡಿಕ್ರಿಯನ್ನು ದಾಖಲಿಸಿರುವರು.

4. ಶ್ರೀ ಜಿ. ಬಾಲಕೃಷ್ಣ ಶಾಸ್ತ್ರಿ, ಮಾನ್ಯ ವಕೀಲರು, ಅಪೀಲು ನ್ಯಾಯಾಲಯದಲ್ಲಿ, ವಿಚಾರಣಾ ನ್ಯಾಯಾಲಯವು 2 ಮತ್ತು 3ರ ವಿವಾದಾಂಶಗಳ ಕುರಿತು ದಾಖಲಿಸಿದ ನಿರ್ಣಯಗಳನ್ನು ಪರಿಗಣಿಸದೇ ಇರುವುದರಿಂದ ಆ ವಿಚಾರಣಾ ನ್ಯಾಯಾಲಯದಲ್ಲಿಯೇ ಮೊಕದ್ದಮೆಯು ತಪ್ಪಾಗಿ ವಾಪಸ್ಸು ಕಳಿಸಿರುವುದನ್ನು ತಮ್ಮ ವಾದದಲ್ಲಿ ಮಂಡಿಸಿರುವರು. ಅವರು ವಿಚಾರಣಾ ನ್ಯಾಯಾಲಯವು ಎತ್ತಿದ 2 ಮತ್ತು 3ರ ವಿವಾದಾಂಶಗಳ ಜೊತೆಯಲ್ಲಿ 'ಸಿ' ಅನುಸೂಚಿಯ ಸ್ವತ್ತುಗಳ ಸಂಬಂಧದಲ್ಲಿಯೂ ಸಹ, ಎತ್ತಿದ ಹೆಚ್ಚುವರಿ ವಿವಾದಾಂಶದಲ್ಲಿ ಕೆಳ ಅಪೀಲು

ನ್ಯಾಯಾಲಯ ಎಸಗಿರುವ ತಪ್ಪನ್ನು ಸಹ ತಮ್ಮ ವಾದದಲ್ಲಿ ನಿವೇದಿಸಿದ್ದಾರೆ. ಅವರು ಎರಡು ಪಕ್ಷಕಾರರು ಮಂಡಿಸಿದ ಸಾಕ್ಷ್ಯಗಳನ್ನು, ತೀರ್ಮಾನಿಸಬೇಕಾದ ಅಪೀಲುಗಳನ್ನು ಮತ್ತು ಅತಿ ತಪ್ಪಿನಿಂದ ಜಾರಿಯಾದ ತೀರ್ಪನ್ನು ಹಿಂದಕ್ಕೆ ಪಡೆಯಲು ಹೇಳಿರುವುದನ್ನು ತಳ್ಳಿ ಹಾಕಲು ತಮ್ಮ ವಾದದಲ್ಲಿ ನಿವೇದಿಸಿರುವರು.

5. ಶ್ರೀ ಎಂ.ಜೆ. ಆಳ್ವ ಮಾನ್ಯ ವಕೀಲರು ಮತ್ತೊಂದು ಕಡೆಯಲ್ಲಿ ಆಕ್ಷೇಪಿತ ತೀರ್ಪನ್ನು ಬೆಂಬಲಿಸಿ ಮತ್ತು ಅಪೀಲನ್ನು ವಜಾ ಮಾಡಲು ತಮ್ಮ ವಾದದಲ್ಲಿ ನಿವೇದಿಸಿರುವರು.

6. ಅಭಿಲೇಖಗಳನ್ನು ಅವಲೋಕಿಸಲಾಗಿದೆ. ಮೊಕದ್ದಮೆಯನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂದುರುಗಿಸಬೇಕು ಎನ್ನುವ ಕೆಳ ನ್ಯಾಯಾಲಯದ ಆಕ್ಷೇಪಿತ ತೀರ್ಪು ಸಮರ್ಥನೀಯವೆ ಎಂಬುದು ಪರಿಗಣಿಸುವ ಅಂಶವಾಗಿದೆ.

7. ಮೊಕದ್ದಮೆಯನ್ನು ಹಿಂದಕ್ಕೆ ಕಳುಹಿಸುವುದಕ್ಕಾಗಿ ಗೊತ್ತುಪಡಿಸಿದ ಕಾರಣಗಳನ್ನು ಆಕ್ಷೇಪಿತ ತೀರ್ಪಿನ 23ನೇ ಪ್ಯಾರಾದಲ್ಲಿ ಕಂಡು ಬರುತ್ತದೆ. ಕೆಳ ಅಪೀಲು ನ್ಯಾಯಾಲಯದ ನ್ಯಾಯಾಧೀಶರ ಅನುಸಾರವಾಗಿ ವಿಚಾರಣಾ ನ್ಯಾಯಾಲಯವು 'ಸಿ' ಅನುಸೂಚಿತ ಸ್ವತ್ತುಗಳ ಕುರಿತು ಮೌನವಾಗಿದೆ ಮತ್ತು ಗುಣಾರ್ಹತೆಗಳ ಮೇಲೆ ಅಪೀಲನ್ನು ನಿರ್ಧರಿಸುವಲ್ಲಿ ಅಸಮರ್ಥನೀಯವಾಗಿದೆ. ದಾವೆಯ 'ಸಿ' ಅನುಸೂಚಿಯ ಸ್ವತ್ತುಗಳ ಸಂಬಂಧದಲ್ಲಿ ಯಾವುದೇ ತೀರ್ಮಾನದ ಗೈರು ಹಾಜರಿಯಲ್ಲಿ ಅಪೀಲನ್ನು ನಿರ್ಧರಿಸದಿರುವುದರಿಂದ ಮತ್ತು ಅದು ಆ ವಿಚಾರದಲ್ಲಿ ವಿಚಾರಣಾ ನ್ಯಾಯಾಲಯದ ತೀರ್ಮಾನವು "ಅರ್ಧ ಬೇಯಿಸಿದ ಅಡಿಗೆ" ಯಾಗಿದೆ ಎಂಬ ಅಭಿಪ್ರಾಯವನ್ನು ಅಧೀನ ಅಪೀಲು ನ್ಯಾಯಾಲಯವು ವ್ಯಕ್ತಪಡಿಸಿದೆ.

8. ಇದು, ಅಧೀನ ಅಪೀಲು ನ್ಯಾಯಾಲಯ ದಾವೆಯ ವಿವೇಕಯುಕ್ತ ದಾಖಲೆಯನ್ನು ಅವಗಾಹನೆಗೆ ತೆಗೆದುಕೊಳ್ಳದಿರುವುದು ಸ್ಪಷ್ಟವಾಗುತ್ತದೆ. ವಿಚಾರಣಾ ನ್ಯಾಯಾಲಯವು ವಾದಿಯ 'ಬಿ' ಮತ್ತು 'ಸಿ' ಅನುಸೂಚಿತ ಸ್ವತ್ತುಗಳಲ್ಲಿ ಪಾಲುಗಾರಿಕೆ

ಮತ್ತು ಅವರ ಪ್ರತ್ಯೇಕ ಸ್ವಾಧೀನತೆಯ ಪಾಲುಗಳಿಗಾಗಿ ಅರ್ಜಿದಾರರ ಹಕ್ಕುಗಳಿಗೆ ಸಂಬಂಧಿಸಿದಂತೆ 3ನೇ ಸಂಖ್ಯೆಯ ವಿವಾದವನ್ನು ಎತ್ತಿರುತ್ತದೆ. ಕೆಳ ಅಪೀಲು ನ್ಯಾಯಾಲಯ ತನ್ನ ತೀರ್ಪಿನ 9ನೇ ಪ್ಯಾರಾದಲ್ಲಿ 'ಸಿ' ಅನುಸೂಚಿಯ ಸ್ವತ್ತುಗಳ ಸಂಬಂಧದಲ್ಲಿ ಯಾವುದೇ ಊಹೆಗಳನ್ನು ಮಾಡದಿರುವುದು" ಸರಿಯಾದುದಲ್ಲ ಎಂಬುದು ಇಲ್ಲಿ ಕಂಡು ಬರುತ್ತದೆ. ಸಂ.36ನೇ ಪ್ಯಾರಾದಲ್ಲಿರುವಂತೆ 3ನೇ ಸಂಖ್ಯೆಯ ವಿವಾದ ಕುರಿತು ಅಭಿಲೇಖಿಸಿದ ನಿರ್ಣಯದಲ್ಲಿ, ವಿಚಾರಣಾ ನ್ಯಾಯಾಲಯವು "ಅರ್ಜಿದಾರ ಅಥವಾ 1 ರಿಂದ 3ನೇ ಸಂಖ್ಯೆಯ ಪ್ರತ್ಯರ್ಜಿದಾರರಿಗೆ 'ಸಿ' ಅನುಸೂಚಿ ಸ್ವತ್ತುಗಳ ದಾವೆಗಳಲ್ಲಿ ಹಕ್ಕಿರುವುದಿಲ್ಲ ಅಥವಾ ಹಿತಾಸಕ್ತಿ ಇಲ್ಲದಿರುವುದನ್ನು, ಪ್ರತ್ಯರ್ಜಿದಾರ 5 ಅನ್ನು ಬಿಟ್ಟಿರುವುದನ್ನು ಮತ್ತು 'ಬಿ' ಅನುಸೂಚಿಯ ಸ್ವತ್ತುಗಳಿಗೆ ಮಾತ್ರವೇ ವಾದಿಗಳು ಪಾಲುಗಾರಿಕೆ ಮತ್ತು ಪ್ರತ್ಯೇಕ ಸ್ವಾಧೀನತೆ ಹೊಂದುತ್ತಾರೆ. ಆದರೆ, 'ಸಿ' ಅನುಸೂಚಿಯ ಸ್ವತ್ತುಗಳಲ್ಲಿ ಪಾಲುಗಾರಿಕೆ ಮತ್ತು ಪ್ರತ್ಯೇಕ ಸ್ವಾಧೀನತೆ ಹೊಂದಲು ಸಾಧ್ಯವಿಲ್ಲವೆಂದು ನಿರ್ಣಯವನ್ನು ತನ್ನ ಗಮನಕ್ಕೆ ತಂದುಕೊಂಡಿದೆ. ಸದರಿ ನಿರ್ಣಯವನ್ನು ಮತ್ತು 'ಸಿ' ಅನುಸೂಚಿಯ ಸ್ವತ್ತುಗಳಲ್ಲಿನ ಮತ್ತು ಮಧ್ಯಕಾಲೀನ ಲಾಭಗಳಲ್ಲಿನ ಪಾಲನ್ನು ಮಂಜೂರು ಮಾಡದಿರುವುದು ಸಹ ವಾದಿಗಳು ಆರ್.ಎ. ಸಂ.28/2010 ಅನ್ನು ದಾಖಲಿಸುವ ಮೂಲಕ ಪ್ರಶ್ನಿಸುತ್ತಾರೆ. ಹಾಗಾಗಿ, ನ್ಯಾಯಿಕ ಸ್ಥಿತಿಯಲ್ಲಿ ಮತ್ತು ಸಾಂದರ್ಭಿಕ ದೃಷ್ಟಿಕೋನದಿಂದ ಅರ್ಜಿಯ ನ್ಯೂನತೆಯನ್ನು ಸರಿಪಡಿಸುವುದಕ್ಕೆ ಅಪೀಲು ನ್ಯಾಯಾಲಯಕ್ಕೆ ಸಾಧ್ಯವಾಗದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

9. ಸರ್ವೇ ಸಾಮಾನ್ಯವಾಗಿ ಅಪೀಲು ನ್ಯಾಯಾಲಯವು ಮೊಕದ್ದಮೆಯನ್ನು ಹಿಂದುರುಗಿಸುವ ನಿರ್ಣಯ ನೀಡುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಇರುವಾಗ ಅವುಗಳನ್ನು ಲಘುವಾಗಿ ಪರಿಗಣಿಸದೆ ತನ್ನ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಕೆಳ ಅಪೀಲು ನ್ಯಾಯಾಲಯ ಸಿವಿಲ್ ಪ್ರಕ್ರಿಯಾ ಸಂಹಿತೆಯ 23 ಅಥವಾ 23ಎ ನಿಯಮದ ಕ್ರಮಾದೇಶ XLI ಮೇರೆಗಿನ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊರಡಿಸಿದ ಆಕ್ಷೇಪಿತ ತೀರ್ಪನ್ನು ಮೊಕದ್ದಮೆಗೆ ದಾವೆಯ ಪ್ರಕಾರದಂತೆ ಆ ಯಾವುದೇ ಅರ್ಜಿ ಇಲ್ಲದಿರುವುದನ್ನು, ಈ ಮೊಕದ್ದಮೆಯ ಯಾವುದೇ ಪ್ರಾರಂಭಿಕ

ವಿವಾದ ಮೇಲೆ ನಿರ್ಣಯವಾಗದಿರುವ ಅಂಶಗಳನ್ನು ಹಾಜರುಪಡಿಸುವುದು. ಕೆಳನ್ಯಾಯಾಲಯ ಸಿವಿಲ್ ದಂಡ ಸಂಹಿತೆಯ 107ನೇ ಪ್ರಕರಣದ ಪ್ರಕಾರ ಮತ್ತು ಕ್ರಮಾದೇಶ XLI ರಲ್ಲಿರುವ 24 ಮತ್ತು 25ನೇ ನಿಯಮದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡಿಲ್ಲದಿರುವುದು ಇದರಿಂದ ಸ್ಪಷ್ಟವಾಗುತ್ತದೆ. ವಾದಿಗಳು 'ಸಿ' ಅನುಸೂಚಿ ಸ್ವತ್ತುಗಳ ಸಂಬಂಧದಲ್ಲಿ ಪರಿಹಾರವನ್ನು ಮಂಜೂರು ಮಾಡದಿರುವುದರಿಂದ ಬಾಧಿತರಾಗಿ ಆರ್‌ಎ ಸಂ.28/2010 ಅನ್ನು ದಾಖಲಿಸಿರುವರು ಮತ್ತು ಪ್ರತಿವಾದಿಗಳು ವಿಚಾರಣಾ ನ್ಯಾಯಾಲಯವು ಹೊರಡಿಸಿದ ಡಿಕ್ರಿಯಿಂದ ಬಾಧಿತರಾಗಿ ಆರ್‌ಎ ಸಂ.29/2010 ಅನ್ನು ದಾಖಲಿಸಿರುವರು. ಆ ಯಾರೊಬ್ಬ ಪಕ್ಷಕಾರರು ಹೊಂದಿರುವುದಾಗಿ ಹೇಳಿರುವ ಆ ಸಾಕಷ್ಟು ಸಾಕ್ಷ್ಯಗಳು ಅಪೀಲನ್ನು ನಿರ್ಣಯಿಸುವುದಕ್ಕೆ ಲಭ್ಯವಿರುವುದಿಲ್ಲ ಮತ್ತು ಕೆಳ ನ್ಯಾಯಾಲಯಕ್ಕೆ ಅಪೀಲುಗಳನ್ನು ನಿರ್ಣಯಿಸುವುದಕ್ಕೆ ಯಾವುದೇ ಸಾಕ್ಷ್ಯಗಳ ಕೊರತೆಯೂ ಕಂಡು ಬಂದಿರುವುದಿಲ್ಲ ಹಾಗು ಸಿವಿಲ್ ಪ್ರಕ್ರಿಯಾ ಸಂಹಿತೆಯ XLI ಕ್ರಮಾದೇಶದ 24 ರಿಂದ 31ನೇ ನಿಯಮಗಳನ್ನು ತನ್ನ ಗಮನಕ್ಕೆ ತಂದುಕೊಳ್ಳದೆ ಅದು ಆಕ್ಷೇಪಿತ ತೀರ್ಪನ್ನು ಹೊರಡಿಸಿರುತ್ತದೆ. ಅದು ಅಪೀಲುಗಳನ್ನು ನಿರ್ಣಯಿಸುವ ಉದ್ದೇಶಕ್ಕಾಗಿ ದಾಖಲೆಯ ಮೇಲೆ ಇರುವಂತಹ ಎಲ್ಲಾ ಸಾಕ್ಷ್ಯಗಳನ್ನು ಪರಿಗಣನೆಗೆ ತೆಗೆದುಕೊಂಡಿದೆ ಮತ್ತು ಸಾಕ್ಷ್ಯವನ್ನು ಮರುವಿವೇಚನೆ ಮಾಡಿದ ನಂತರದಲ್ಲಿ ವಿಚಾರಣಾ ನ್ಯಾಯಾಲಯ ತೀರ್ಪು ಮತ್ತು ಡಿಕ್ರಿಯನ್ನು ಸ್ಥಿರೀಕರಿಸಿದೆ ಅಥವಾ ಮಾರ್ಪಾಡು ಮಾಡಿದೆ ಅಥವಾ ವಿಪರ್ಯಯಾಗೊಳಿಸಿದೆ. ಕೆಳ ನ್ಯಾಯಾಲಯವು ಅನುಸರಿಸಿದ ಈ ಕ್ರಮವು ಕಾನೂನಿನಲ್ಲಿ ಈಗಾಗಲೇ ಸುಸ್ಥಾಪಿತವಾಗಿರುವ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ ಮತ್ತು ಪ್ರತಿಕೂಲವಾದುದಾಗಿದೆ. ಮೊಕದ್ದಮೆಯನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸುವುದು ಅತ್ಯವಶ್ಯಕವೆಂದು ಕಂಡು ಬರದ ಹೊರತು ಹಾಗೆ ಮಾಡುವುದು ಆರೋಗ್ಯಕರವಾದ ಪದ್ಧತಿಯಾಗಿರುವುದಿಲ್ಲ. ಹಾಗೆ ಮೊಕದ್ದಮೆಯನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸುವುದರಿಂದ ಮೊಕದ್ದಮೆಯ ಅಂತಿಮ ನಿರ್ಣಯಕ್ಕಾಗಿ ಪಕ್ಷಕಾರರು ಮತ್ತೆ ಇನ್ನಷ್ಟು ಕಾಲಾವಧಿಯವರೆಗೂ ಪ್ರತೀಕ್ಷಿಸಬೇಕಾಗುತ್ತದೆ ಮತ್ತು ಪಕ್ಷಕಾರರಲ್ಲಿ ಯಾರಾದರೂ ಒಬ್ಬರು ಮತ್ತೆ ಅಪೀಲುಗಳನ್ನು ಹಾಕುವ ಸಂಭವವಿರುತ್ತದೆ.

10. ಅಪೆಕ್ಸ್ ನ್ಯಾಯಾಲಯವು ***ಪಿ. ಪುರುಷೋತ್ತಮ ರೆಡ್ಡಿ ಮತ್ತು ಮತ್ತೊಬ್ಬರು –ವಿರುದ್ಧ– ಪ್ರತಾಪ್ ಸ್ಟೀಲ್ಸ್ ಲಿಮಿಟೆಡ್***[1] ಪ್ರಕರಣದಲ್ಲಿ ನೀಡಿದ ತೀರ್ಪು ಹೀಗಿದೆ.

> "10. ಉಚ್ಚ ನ್ಯಾಯಾಲಯವು ಕಾನೂನು ಸಮ್ಮತತೆ ಮತ್ತು ಹಿಂದಕ್ಕೆ ಕಳುಹಿಸುವ ಸ್ವತ್ತಿನ ಆದೇಶವನ್ನು ಮಾಡಿರುವ ಮುಂದಿನ ಪ್ರಶ್ನೆಯನ್ನು ಪರಿಶೀಲಿಸಬೇಕಾಗುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆ ತಿದ್ದುಪಡಿ ಅಧಿನಿಯಮ, 1976 ಮೂಲಕ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶದ 41 ರಲ್ಲಿನ 23ಎ ನಿಯಮವನ್ನು ಸೇರಿಸುವ ಮುಂಚೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಆದೇಶದಲ್ಲಿ ಅಪೀಲು ನ್ಯಾಯಾಲಯವು ಎರಡು ಉಪಬಂಧಗಳನ್ನು ಮಾತ್ರವೇ ಹಿಂದಕ್ಕೆ ಪಡೆಯಲು ಉದ್ದೇಶಿಸಿದೆ. ವಿಚಾರಣ ನ್ಯಾಯಾಲಯ 23ನೇ ನಿಯಮವನ್ನು ಅನ್ವಯಿಸಿ ಇತರ ವಿವಾದಗಳನ್ನು ತೀರ್ಮಾನಿಸದೆ ಪ್ರಾರಂಭಿಕ ವಿವಾದ ಮೇಲೆ ಮಾಡಿದ ನಿರ್ಣಯಗಳನ್ನು ಅಭಿಲೇಖಿಸುವ ಮೂಲಕ ಇಡೀ ದಾವೆಯನ್ನು ವಿಲೇ ಮಾಡಿದಾಗ ಮತ್ತು ಪ್ರಾರಂಭಿಕ ವಿವಾದದ ಮೇಲೆ ನಿರ್ಣಯವು ಅಪೀಲಿನಲ್ಲಿ ಪ್ರತಿಕೂಲವಾಗಿರುತ್ತದೆ. 25ನೇ ನಿಯಮವನ್ನು ಅನ್ವಯಿಸಿದಾಗ ಅಪೀಲು ನ್ಯಾಯಾಲಯವು ಯಾವುದೇ ವಿವಾದ ಸ್ವರೂಪ ಅಥವಾ ವಿಚಾರಣೆಗೆ ವಿಚಾರಣಾ ನ್ಯಾಯಾಲಯದ ಭಾಗವನ್ನು ಬಿಟ್ಟು ಬಿಡಲಾಗಿದೆ ಎಂಬುದನ್ನೂ ತನ್ನ ಗಮನಕ್ಕೆ ತಂದುಕೊಂಡಿದೆ ಅಥವಾ ಸಂಗತಿಯ ಯಾವುದೇ ಪ್ರಶ್ನೆಯನ್ನು ನಿರ್ಧರಿಸುವುದಕ್ಕೆ ದಾವೆಯ ಮೇಲಿನ ಗುಣಾರ್ಹತೆಯನ್ನು ತೀರ್ಮಾನಿಸುವ ಹಕ್ಕಿಗೆ ಅಪೀಲು ನ್ಯಾಯಾಲಯದ ಆ ಯಾವುದೇ ಅಭಿಪ್ರಾಯವು ಅವಶ್ಯಕವಾದುದಾಗಿದೆ. ಆದರಿಂದ 25ನೇ ನಿಯಮದ ಮೂಲಕ ಕಳುಹಿಸಲು ಉದ್ದೇಶಿಸಿದ ಮೊಕದ್ದಮೆಯನ್ನು ವಿಚಾರಣೆ

1. (2002)2 ಎಸ್‌ಸಿಸಿ 686

ಮಾಡುವುದಕ್ಕಾಗಿ ಅದು ಉಲ್ಲೇಖಿಸಿದಂಥ ವಿವಾದಗಳನ್ನು ಮಾತ್ರವೇ ವಿಚಾರಣೆ ಮಾಡಲಿ ಅಧೀನ ನ್ಯಾಯಾಲಯದಂತೆಯೇ ಅದು ಕಳುಹಿಸಲು ಪರಿಮಿತವಾಗಿದೆ ಮತ್ತು ಹಾಗೇ ಮಾಡಿದಾಗ, ಅದಕ್ಕಾಗಿ ವಿಚಾರಣಾ ನ್ಯಾಯಾಲಯದ ನಿರ್ಣಯಗಳ ಮತ್ತು ಕಾರಣಗಳ ಜೊತೆಯಲ್ಲಿ ಅಭಿಲೇಖಿಸಿದ ಸಾಕ್ಷ್ಯವನ್ನು ಅಪೀಲು ನ್ಯಾಯಾಲಯಕ್ಕೆ ಹಿಂದುರುಗಿಸುವುದನ್ನು ಅಗತ್ಯಪಡಿಸುತ್ತದೆ. ಆದುದರಿಂದ ಅದು ಆ ನ್ಯಾಯಾಲಯ 1976 ತಿದ್ದುಪಡಿಗೂ ಮುಂಚೆ ಕಾನೂನಿನ ಸ್ಥಾನಮಾನವನ್ನು ಇತ್ಯರ್ಥಪಡಿಸುವವರೆಗೂ, ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದಡಿಯಲ್ಲಿ ಅಂತರ್ನಿಹಿತ ಅಧಿಕಾರ ವ್ಯಾಪ್ತಿಯಲ್ಲಿ ಅದು ಯುಕ್ತ ಮೊಕದ್ದಮೆಯಲ್ಲಿ ನ್ಯಾಯದ ಹಿತದೃಷ್ಟಿಯಿಂದ ಅವಶ್ಯಕ ಉತ್ತಮವಾದುದೆಂದು ಪರಿಗಣಿಸಬಹುದಾದಂಥವುಗಳನ್ನು ಕಳುಹಿಸಲು, ಹಿಂದಕ್ಕೆ ಕಳುಹಿಸುವುದನ್ನು ಆದೇಶಿಸುವುದಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಕ್ರಮಾದೇಶದ ಯಾವುದೇ ನಿರ್ದಿಷ್ಟ ಉಪಬಂಧಗಳು ಒಳಪಡುವುದಿಲ್ಲ. ಈ ಸಂದರ್ಭದಲ್ಲಿ ಯಾವುದೇ ಹೆಚ್ಚುವರಿ ಸಾಕ್ಷ್ಯಗಳನ್ನು ತೆಗೆದುಕೊಳ್ಳುವುದು ಅಗತ್ಯವಿದ್ದ ಪಕ್ಷದಲ್ಲಿ, 27ನೇ ನಿಯಮದ (1)ನೇ ಉಪನಿಯಮದ ಖಂಡವು ಅನ್ವಯಿಸುವುದು, ಅಂಥ ಹೆಚ್ಚುವರಿ ಸಾಕ್ಷ್ಯಗಳನ್ನು ಅಪೀಲು ನ್ಯಾಯಾಲಯ ಮುಂದೆ ಸ್ವತ: ತಾನಾಗಿಯೇ ಬಾಯಿ ಮಾತಿನ ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಅವಕಾಶ ಮಾಡಿಕೊಡುವುದು ಅಥವಾ ಅಪೀಲು ನ್ಯಾಯಾಲಯವು ಅಂಥ ಸಾಕ್ಷ್ಯಗಳನ್ನು ಸ್ವೀಕರಿಸುವುದಕ್ಕೆ ಅಧೀನ ನ್ಯಾಯಾಲಯಕ್ಕೆ ನಿರ್ದೇಶಿಸುವುದು ಮತ್ತು ಅದನ್ನು ಅಪೀಲು ನ್ಯಾಯಾಲಯಕ್ಕೆ ಕಳುಹಿಸುವುದು. 1976ರಲ್ಲಿ 23ಎ ನಿಯಮವನ್ನು 41ನೇ ಕ್ರಮಾದೇಶದಲ್ಲಿ ಸೇರಿಸಲಾಗಿದೆ. ಆ 23ಎ ನಿಯಮವು, ಪ್ರಾರಂಭಿಕ ವಿಷಯದ ಮೇಲೆ ಹೊರತುಪಡಿಸಿ ಅನ್ಯಥಾ ಮೊಕದ್ದಮೆಯನ್ನು

ವಿಚಾರಣಾ ನ್ಯಾಯಾಲಯ ವಿಲೇ ಮಾಡಿದರೆ (i) ಡಿಕ್ರಿಯ ವಿರುದ್ಧದ ಅಪೀಲಿನ ಸುನಾವಣೆಯನ್ನು ಅಪೀಲು ನ್ಯಾಯಾಲಯಕ್ಕೆ ಕಳುಹಿಸುವ ಸಂಬಂಧದಲ್ಲಿ ಉಪಬಂಧಿಸಿದೆ ಮತ್ತು (ii) ಅಪೀಲಿನಲ್ಲಿ ಡಿಕ್ರಿಯನ್ನು ವಿಪರ್ಯಾಯಗೊಳಿಸುತ್ತದೆ ಮತ್ತು ಮರು ವಿಚಾರಣೆ ಅವಶ್ಯಕವೆಂದು ಪರಿಗಣಿಸುತ್ತದೆ. ಮೇಲಿನ ಎರಡು ಸನ್ನಿವೇಶಗಳು ತೃಪ್ತಿಕರವಾಗಿರುವಾಗ ಅಪೀಲು ನ್ಯಾಯಾಲಯ 23ನೇ ನಿಯಮದ ಅಡಿಯಲ್ಲಿ ಅದು 23ಎ ನಿಯಮದ ಅಡಿಯಲ್ಲಿರುವಂತೆ ಕಳುಹಿಸುವಂತಹ ಅದೇ ಅಧಿಕಾರವನ್ನು ಅದು ಚಲಾಯಿಸುವುದು. ತಿದ್ದುಪಡಿಯ ನಂತರ, 23 ಮತ್ತು 23ಎ ನಿಯಮವು ಸಮಗ್ರವಾಗಿ ಎಲ್ಲ ಮೊಕದ್ದಮೆಗಳನ್ನು ಸಮಗ್ರವಾಗಿ ಕಳುಹಿಸುವುದನ್ನು ಒಳಗೊಳ್ಳುತ್ತದೆ. ಈ ನಿಯಮಗಳ ಉಪಬಂಧಗಳಲ್ಲಿನ ಅಭಿವ್ಯಕ್ತಿಗಳ ಹಿನ್ನೆಲೆಯಲ್ಲಿ ಉಚ್ಚ ನ್ಯಾಯಾಲಯ ತನ್ನ ಅಂತರ್ನಿಹಿತ ಅಧಿಕಾರಗಳನ್ನು ಅವಲಂಬಿಸಿ ಕಳುಹಿಸಲು (ಎಐಆರ್ 1965 ಎಸ್‌ಸಿ 364ರಲ್ಲಿನ ಪುಟ 399) ಮಹೇಂದ್ರ ಮಾನಿಲಾಲ್ ನಾನಾವತಿ –ವಿರುದ್ಧ– ಸುಶೀಲಾ ಮಹೇಂದ್ರ ನಾನಾವತಿ ಈ ಮೊಕದ್ದಮೆಯಲ್ಲಿ ಹೇಳಿರುವಂತೆ ಹಿಂದಕ್ಕೆ ಕಳುಹಿಸಲು ಸಾಧ್ಯವಾಗುವುದಿಲ್ಲ. ಈ ಸಂಹಿತೆಯಲ್ಲಿ ಉಪಬಂಧಗಳ ಅಭಿವ್ಯಕ್ತಿಯ ಗೈರು ಹಾಜರಿಯಲ್ಲಿ ಮಾತ್ರವೇ ನ್ಯಾಯದ ಹಿತದೃಷ್ಟಿಯಿಂದ ಅದು ಸುಸ್ಪಷ್ಟವಾಗಿ ಇತ್ಯರ್ಥವಾಗುವವರೆಗೂ ಅಂತರ್ನಿಹಿತ ಅಧಿಕಾರದಲ್ಲಿ ಲಭ್ಯವಿರಬೇಕಾಗುತ್ತದೆ. ವಿನಾಯಿತಿಗೊಳಪಟ್ಟ ಮೊಕದ್ದಮೆಗಳಲ್ಲಿ ಮಾತ್ರವೇ ನ್ಯಾಯಾಲಯದ 23 ಮತ್ತು 23ಎ ನಿಯಮದಲ್ಲಿ ಕಳುಹಿಸುವ ಅಧಿಕಾರವನ್ನು ಚಲಾಯಿಸುವುದು ಅಪ್ರಸ್ತುತವಾಗುತ್ತದೆ ಎಂದರೆ ವರಿಷ್ಠ ನ್ಯಾಯಾಲಯ, ಸಿವಿಲ್ ಪ್ರಕ್ರಿಯಾ ಸಂಹಿತೆಯ 3 ನಿಯಮದ 20ನೇ ಕ್ರಮಾದೇಶ ಅಥವಾ 31ನೇ ನಿಯಮದ 41ನೇ ಕ್ರಮಾದೇಶದ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ಮೊಕದ್ದಮೆಯನ್ನು ತೃಪ್ತಿಕರವಾಗಿ ವಿಲೆ ಮಾಡದಿರುವುದನ್ನು

ಅಪೀಲಿನ ಅಡಿಯಲ್ಲಿನ ತೀರ್ಪಿನಲ್ಲಿ ಕಂಡು ಬಂದ ಪಕ್ಷದಲ್ಲಿ ಮತ್ತು ಕಾನೂನಿನ ಕಣ್ಣಿನಲ್ಲಿ ಅದು ಸರಿಯಾದ ತೀರ್ಪು ಆಗಿಲ್ಲದಿದ್ದ ಪಕ್ಷದಲ್ಲಿ, ವರಿಷ್ಠ ನ್ಯಾಯಾಲಯವು ಅದನ್ನು ತಳ್ಳಿ ಹಾಕಬಹುದು ಮತ್ತು ಪಕ್ಷಕಾರರ ಮೌಲ್ಯಯುತವಾದ ಹಕ್ಕುಗಳನ್ನು ಸಂರಕ್ಷಿಸುವ ಸಲುವಾಗಿ ಈಗಾಗಲೇ ನೀಡಿದ ತೀರ್ಪನ್ನು ಮರು–ಪರಿಶೀಲಿಸುವುದಕ್ಕಾಗಿ ವಿಷಯವನ್ನು ಹಿಂದಕ್ಕೆ ಕಳುಹಿಸಬಹುದು. ಅಪೀಲು ನ್ಯಾಯಾಲಯ ಸಿವಿಲ್ ಪ್ರಕ್ರಿಯಾ ಸಂಹಿತೆಯ 23ನೇ ನಿಯಮ ಅಥವಾ 23ಎ ನಿಯಮಗಳು ಮೊಕದ್ದಮೆಯನ್ನು ಒಳಗೊಳ್ಳದಿರುವಾಗ ಕಳುಹಿಸುವ ಆದೇಶವನ್ನು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಹಿಂದಕ್ಕೆ ಕಳುಹಿಸುವಂತಹ ಅನಪೇಕ್ಷಿತ ಆದೇಶವನ್ನು ಮಾಡುವುದರಿಂದ ವ್ಯಾಜ್ಯವು ಬದುಕನ್ನು ಅನಿಶ್ಚಿತಗೊಳಿಸುತ್ತದೆ. ಆದುದರಿಂದ ಅವುಗಳನ್ನು ತಪ್ಪಿಸಬೇಕು.

11. ಪ್ರಸ್ತುತ ಮೊಕದ್ದಮೆಯ ಪ್ರಾರಂಭಿಕ ಅಂಶದ ಮೇಲಿನ ದಾವೆಯನ್ನು ವಿಚಾರಣಾ ನ್ಯಾಯಾಲಯ ವಿಲೇ ಮಾಡಿರುವುದಿಲ್ಲ. ದಾವೆಯ ಎಲ್ಲ ವಿವಾದಾಂಶಗಳನ್ನು ನಿರ್ಣಯಿಸಿ ಅಭಿಲೇಖಿಸುವ ಮೂಲಕ ತೀರ್ಮಾನಿಸುವುದು. ಇದರಲ್ಲಿ ಅಪೀಲಿನ ಅಡಿಯಲ್ಲಿ ಅಪೀಲು ತೀರ್ಪಿನಲ್ಲಿರುವುದನ್ನು ಉಚ್ಚ ನ್ಯಾಯಾಲಯವು ಪ್ರಾರಂಭಿಕವಾಗಿರದ, ಕೆಲವು ವಿವಾದಗಳಲ್ಲಿನ ನಿರ್ಣಯಗಳಲ್ಲಿ ಅದು ಅಭಿಲೇಖಿಸಿದೆ, ಮತ್ತು ಅದು ವಿಚಾರಣಾ ನ್ಯಾಯಾಲಯವು ವಿಚಾರಣೆ ಮಾಡಬೇಕಾದ ಮತ್ತು ತೀರ್ಮಾನಿಸಬೇಕಾದ ಹೆಚ್ಚುವರಿ ವಿವಾದಗಳನ್ನು ಅದು ರೂಪಿಸಿದೆ ಹಾಗೂ ಅದನ್ನು ತೀರ್ಮಾನಿಸಲು ವಿಚಾರಣಾ ನ್ಯಾಯಾಲಯಕ್ಕೆ ಬಿಟ್ಟಿದೆ. ಈ ಮೊಕದ್ದಮೆಗೆ 41ನೇ ಕ್ರಮಾದೇಶದ 23ನೇ ನಿಯಮವಾಗಲೀ ಅಥವಾ 23ಎ ನಿಯಮವನ್ನಾಗಲೀ ಅನ್ವಯಿಸಿ, ಮೊಕದ್ದಮೆಯನ್ನು ಮರು ವಿಚಾರಣೆ ಮಾಡಲು ಅವಶ್ಯಕವಾಗಿ ಪರಿಗಣಿಸಲು ಸಾಧ್ಯವಾಗುವುದಿಲ್ಲ. ಆ

ನಿಯಮದ ಅಡಿಯಲ್ಲಿ ಭಾಗಶಃವಾಗಿಯಾದರೂ ಹೆಚ್ಚುವರಿ ಸಾಕ್ಷ್ಯಗಳನ್ನು ಹಾಜರುಪಡಿಸಿ ಸಮರ್ಥಿಸುವುದಕ್ಕೆ 27ನೇ ನಿಯಮದ ಮೂಲಕ ಉದ್ದೇಶಿತ ಪರಿಸ್ಥಿತಿಗಳು ಇಲ್ಲದಿರುವುದು 25ನೇ ನಿಯಮವನ್ನು ಉಲ್ಲೇಖಿಸುವ ಮೂಲಕ ಕಳುಹಿಸುವ ಸಿಂಧುತ್ವವನ್ನು ಪರಿಶೀಲಿಸಬೇಕಾಗಿದೆ . . .”

11. ಸಿವಿಲ್ ಪ್ರಕ್ರಿಯಾ ಸಂಹಿತೆಯ XLI ಕ್ರಮಾದೇಶ ಮತ್ತು 23 ರಿಂದ 25ನೇ ನಿಯಮಗಳ ಅಡಿಯಲ್ಲಿ ಉಪಬಂಧಗಳನ್ನು ಪರಿಗಣಿಸಿರುವ ***ಉಮಾ –ವಿರುದ್ಧ– ಎನ್.ವಿ. ರಾಜಾಚಾರಿ***[2] ಮೊಕದ್ದಮೆಯಲ್ಲಿ ಅದು ಪರಿಗಣನೆಯು ಈ ಮುಂದಿನಂತಿದೆ:

*“19. ವಾದಿಯು ಸುಸಂಗತ ಸಾಕ್ಷ್ಯಗಳನ್ನು ಹಾಜರುಪಡಿಸಲು ಸಾಧ್ಯವಾಗದಿದ್ದಲ್ಲಿ ಅಥವಾ ವಿಚಾರಣ ನ್ಯಾಯಾಲಯ ಸಾಕ್ಷ್ಯವನ್ನು ಸರಿಯಾಗಿ ವಿವೇಚಿಸಿಲ್ಲದಿದ್ದಲ್ಲಿ, ಅದನ್ನು ಮಾಡುವುದು ಅಪೀಲು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಅದು ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಕ್ರಮಾದೇಶದ 25, 27, 29 ಮತ್ತು 31ನೇ ನಿಯಮದ ಅಡಿಯಲ್ಲಿನ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಪೀಲು ನ್ಯಾಯಾಲಯ ತನ್ನ ಕರ್ತವ್ಯವನ್ನು ನಿರ್ವಹಿಸಬೇಕು.”*

12. ಮೊಕದ್ದಮೆಯನ್ನು ಹಿಂದಕ್ಕೆ ಕಳುಹಿಸುವುದರಿಂದ ವಿಳಂಬತೆಗೆ ಮತ್ತು ಈ ದಾವೆಯಲ್ಲಿನ ಪಕ್ಷಕಾರರ ಪೂರ್ವಾಗ್ರಹಕ್ಕೆ ಕಾರಣವಾಗುತ್ತದೆ. ದಾವೆಯನ್ನು ಕಳುಹಿಸಲು ನೀಡಿದ ಅನಕ್ಷೇಪಿತ ಆದೇಶವು ಬದುಕಿನ ಅನಿಶ್ಚಿತತೆಗೆ ಕಾರಣವಾಗುವುದರಿಂದ ವ್ಯಾಜ್ಯವನ್ನು ಮರುವಿಚಾರಣೆಗಾಗಿ ಹಿಂದಕ್ಕೆ ಕಳುಹಿಸುವುದನ್ನು ತಡೆಯಬೇಕಾಗಿದೆ. ಸಾಕ್ಷ್ಯಗಳು ಲಭ್ಯವಿರುವಾಗ, ನ್ಯಾಯಾಲಯ ಒಂದು ಅಥವಾ

2. ಐಎಲ್ಆರ್ 2010 ಕೆಎಆರ್ 3078

ಇತರ ಕ್ರಮದ ಅಪೀಲುಗಳನ್ನು ನಿರ್ಣಯಿಸಬೇಕು. ಅವಶ್ಯಕ ವಿವಾದಗಳು ಉದ್ಭವಿಸದಿದ್ದಲ್ಲಿ, ವಿವಾದಗಳು ಮರುವಿಚಾರಣೆಯ ಅಥವಾ ಹೆಚ್ಚುವರಿ ವಿವಾದಗಳು ಉಂಟಾಗಿದ್ದಲ್ಲಿ ಮತ್ತು ಅಪೀಲುಗಳು ತೀರ್ಮಾನವಾಗಿರಬೇಕಿರುವಾಗ, ಈ ಮೊಕದ್ದಮೆಯನ್ನು ಹಿರಿಯ ಮತ್ತು ಅನುಭವಿ ನ್ಯಾಯಿಕ ಅಧಿಕಾರಿಗಳು ಮುಖ್ಯಸ್ಥರಾಗಿರುವ ಕೆಳ ಅಪೀಲು ನ್ಯಾಯಾಲಯ ಸಿವಿಲ್ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣದ ಮೇರೆಗಿನ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ XLI ಕ್ರಮಾದೇಶದ, 24 ರಿಂದ 31 ನಿಯಮಗಳಲ್ಲಿ ಉಪಬಂಧಿಸಿದ ಮಾರ್ಗಸೂಚಿಗಳಂತೆ ಅಪೀಲು ನ್ಯಾಯಾಲಯದ ಅಧಿಕಾರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಪೀಲು ನ್ಯಾಯಾಲಯದ ಅಪೀಲುಗಳನ್ನು ತೀರ್ಮಾನಿಸುವುದು.

13. ಕೆಳ ನ್ಯಾಯಾಲಯವು ಅಂತಿಮ ಪಕ್ಷಕಾರರ ನಡುವಿನ ವಿವಾದದ ದಾಖಲೆ ಮತ್ತು ತೀರ್ಮಾನಗಳ ಮೇಲೆ ಪಡೆದ ಸಾಕ್ಷ್ಯಗಳನ್ನು ಪರಿಗಣಿಸಿ ಅಂತಿಮಗೊಳಿಸುವುದಕ್ಕೆ ಪ್ರತಿಯಾಗಿ ಹಿಂದಕ್ಕೆ ಕಳುಹಿಸುವ ತೀರ್ಪನ್ನು ಹೊರಡಿಸಿರುವುದು ಕೆಳ ನ್ಯಾಯಾಲಯದ ಸಂಪೂರ್ಣ ಸ್ವೇಚ್ಛಾನುಸಾರದ ತೀರ್ಪಾಗಿದೆ.

14. ***ಎಂ.ಎಚ್. ಮಹಾಬಲೇಶ್ವರ್ –ವಿರುದ್ಧ– ಸಹಕಾರಿ ಸೊಸೈಟಿಗಳ ಜಂಟಿ ರಿಜಿಸ್ಟ್ರಾರ್, ಬೆಂಗಳೂರು*** [3] ಇವರ ಮೊಕದ್ದಮೆಯಲ್ಲಿ ಹೇಳಲಾದ ಕಾನೂನಿನಲ್ಲಿ ನ್ಯಾಯಯುತವಾದ ಅಪೀಲುಗಳ ಬಗ್ಗೆ ಹೇಳಿದೆ. ಆಕ್ಷೇಪಿತ ತೀರ್ಪನ್ನು ದಾವೆಯ ದಾಖಲೆ ಮತ್ತು ದಾವೆಗೆ ಇಬ್ಬರೂ ಪಕ್ಷಕಾರರು ದಾಖಲಿಸಿ ಅಪೀಲುಗಳಲ್ಲೂ, ದುರುಪಯೋಗಕ್ಕೆ ಒಳಗಾದುದಕ್ಕೆ ವಿರೋಧ ವ್ಯಕ್ತವಾಗಿರುತ್ತದೆ. ಆದರಿಂದ ಅಧಿಕಾರ ವ್ಯಾಪ್ತಿಯನ್ನು ನ್ಯಾಯಿಕ ವಿಚಾರ ಸ್ಥಿತಿಯನ್ನು ಅನ್ವಯಿಸಲು ಸಾಧ್ಯವಾಗದಿರುವುದರಿಂದ ಮತ್ತು ಕರ್ತವ್ಯವನ್ನು ತ್ಯಜಿಸುವಿಕೆಯಿಂದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ವಿಫಲವಾಗಿದೆ.

3. ಐಎಲ್ಆರ್ 2014 ಕೆಎಆರ್ 1937

ಮೇಲಿನ ಅಭಿಪ್ರಾಯೋಕ್ತಿಯಿಂದ, ಅಪೀಲನ್ನು ಪುರಸ್ಕರಿಸಿದೆ ಮತ್ತು ಆಕ್ಷೇಪಿತ ತೀರ್ಪನ್ನು ಮತ್ತು ಡಿಕ್ರಿಯನ್ನು ತಳ್ಳಿಹಾಕಿದೆ. ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯ, ದಕ್ಷಿಣ ಕನ್ನಡ ಪುತ್ತೂರು ಇವರು ದಾಖಲಿಸಿದ ಆರ್‌ಎ ಸಂ. 2010ರ 28 ಮತ್ತು 29 ಮೊಕದ್ದಮೆಯ ಕಡತವನ್ನು ವಾಪಸ್ಸು ಕಳುಹಿಸಲಾಗಿದೆ.

ಪಕ್ಷಕಾರರು 20.08.2016 ರಂದು ಕೆಳ ಅಪೀಲು ನ್ಯಾಯಾಲಯದ ಮುಂದೆ ಹಾಜರಾಗುವುದಕ್ಕೆ ಮತ್ತು ಹೆಚ್ಚಿನ ಆದೇಶಗಳನ್ನು ಸ್ವೀಕರಿಸುವುದಕ್ಕೆ ನಿರ್ದೇಶಿಸಿದೆ. ಮೇಲೆ ಹೇಳಿದ ಅಭಿಪ್ರಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಪೀಲುಗಳನ್ನು ತ್ವರಿತವಾಗಿ ಮತ್ತು ದಿನಾಂಕ:17.12.2016ಕ್ಕಿಂತ ಮುಂಚೆ ತೀರ್ಮಾನಿಸತಕ್ಕದ್ದು.

ವೆಚ್ಚಗಳು ಇಲ್ಲ.

---